**ದಿನಾಂಕಃ 20.06.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಎದುರುದಾರರ ಪರ ವಕೀಲರಿಂದ**

ನಾನು ಎಂ ಎ., ಬಿಎಡ್., ಓದಿದ್ದೇನೆ. ಅದು ಉನ್ನತವಾದ ವ್ಯಾಸಂಗ ಎಂದರೆ ಸರಿ. ಮದುವೆ ಮಾತುಕತೆ ಬೆಳತ್ತೂರಿನಲ್ಲಿ ಆಗಿರುತ್ತದೆ. ಮಧುವನಹಳ್ಳಿಯ ಯಜಮಾನರು, ಬೆಳತ್ತೂರಿನ ಯಜಮಾನರು, ನನ್ನ ತಂದೆ ತಾಯಿ, ನನ್ನ ಅಕ್ಕ ಭಾವ ಮತ್ತು ಮಾವಂದಿರು ಎಲ್ಲಾ ಸೇರಿದ್ದರು. ಎದುರುದಾರರ ತಂದೆ ತಾಯಿ ಕೂಡ ಮಾತುಕತೆಯಲ್ಲಿದ್ದರು. ಮಾತುಕತೆಯಲ್ಲಿ ಎದುರುದಾರರಿಗೆ 30 ಗ್ರಾಂ ಚಿನ್ನದ ಸರ, 6 ಗ್ರಾಂ ಚಿನ್ನದ ಉಂಗುರ, 25 ಸಾವಿರಗಳ ಸೂಟು ಬೂಟು ಕೊಡುವಂತೆ ಮಾತುಕತೆಯಾಗಿತ್ತು. 30 ಗ್ರಾಂ ಚಿನ್ನದ ಸರ, 6 ಗ್ರಾಂ ಚಿನ್ನದ ಉಂಗುರ, 25 ಸಾವಿರಗಳ ಸೂಟು ಬೂಟು ಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಎದುರುದಾರರು ಪಿಯುಸಿ ಓದಿದ್ದಾರೆ. ಎದುರುದಾರರ ತಂದೆ ತಾಯಿಗೆ ಒಟ್ಟು ಐದು ಜನ ಮಕ್ಕಳು ಅವರಲ್ಲಿ ಒಬ್ಬರು ತೀರಿಕೊಂಡಿರುತ್ತಾರೆ ಈಗ ನಾಲ್ಕು ಜನ ಇರುತ್ತಾರೆ. ನನ್ನ ಅತ್ತೆ ಮಾವನಿಗೆ ಒಬ್ಬನೇ ಮಗ ಎಂದರೆ ಸರಿ. ಉಳಿದ ಜನ ಮೂರು ಹೆಣ್ಣುಮಕ್ಕಳು ಎಂದರೆ ಸರಿ. ನಾನು ಉನ್ನತ ವ್ಯಾಸಂಗ ಮಾಡಿದ ಕಾರಣ ನನ್ನ ಕುಟುಂಬದ ಜವಾಬ್ದಾರಿಯನ್ನು ನಾನೇ ಹೊರಬೇಕಿತ್ತು ಎಂದರೆ ಸರಿ. ದಿನಾಂಕಃ 20.08.2015 ರಂದು ವಾಸವಿ ಮಹಲ್ ಕೊಳ್ಳೇಗಾಲದಲ್ಲಿ ನನ್ನ ಮದುವೆ ನಡೆಯಿತು ಎಂದರೆ ಸರಿ. ಮದುವೆ ಖರ್ಚನ್ನೆಲ್ಲಾ ಎದುರುದಾರರೇ ಭರಿಸುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ಒಂದು ಲಕ್ಷ ಕೊಟ್ಟಿರುತ್ತಾರೆ ಉಳಿದ ಎರಡು ಲಕ್ಷಗಳನ್ನು ನಾವೇ ಹಾಕಿರುತ್ತೇವೆ ಎಂದು ಉತ್ತರಿಸುತ್ತಾರೆ. ಮದುವೆಯಾದ ನಂತರ ನನ್ನ ಗಂಡ ಮತ್ತು ಅತ್ತೆ ಮಾವಂದಿರು ಚೆನ್ನಾಗಿ ನೋಡಿಕೊಂಡರು ಎಂದು ಹೇಳುವುದು ಸುಳ್ಳು. ಸಾಕ್ಷಿ ಮುಂದುವರೆದು ಮದುವೆಯಾದ ಎರಡು ದಿನದಲ್ಲಿ ಎದುರುದಾರರ ಮನೆಯವರು ನಾನು ಅವರಿಗೆ ಇಷ್ಟ ಇಲ್ಲ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ.

ಎದುರುದಾರರು ನನಗೆ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡುತ್ತಿದ್ದರು ಎಂದು ನನ್ನ ಅರ್ಜಿಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಎದುರುದಾರರು ನನಗೆ ದೈಹಿಕ ಹಿಂಸೆ ನೀಡುತ್ತಿದ್ದ ಬಗ್ಗೆ ನಾನು ಯಾವುದೇ ಪೋಲೀಸ್ ದೂರು ನೀಡಿಲ್ಲ. ನಮ್ಮ ವಿವಾಹದಿಂದ ನಮಗೆ ಆಧ್ಯ ಎಂಬ ಹೆಣ್ಣು ಮಗು ಹುಟ್ಟಿರುತ್ತದೆ ಎಂದರೆ ಸರಿ. ಮಗು ಜನನವಾಗುವ ಸಮಯದಲ್ಲಿ ಆದ ಆಸ್ಪತ್ರೆ ಖರ್ಚನ್ನು ಎದುರುದಾರರು ಮತ್ತು ಆತನ ತಂದೆ ತಾಯಿ ಭರಿಸಿರುತ್ತಾರೆ ಎಂದು ಹೇಳುವುದು ಸುಳ್ಳು. ಮಗುವಿನ ಬಾಣಂತನಕ್ಕೆ ನಾನು ನನ್ನ ತವರು ಮನೆಗೆ ಹೋಗಿದ್ದೆ ಎಂದರೆ ಸರಿ. ನನ್ನ ಬಾಣಂತನವನ್ನು ನನ್ನ ತಂದೆ ತಾಯಿ ನೋಡಿಕೊಂಡಿರುತ್ತಾರೆ. ಮಗುವಿಗೆ ಒಂದು ವರ್ಷವಾಗುವ ತನಕ ನಾನು ನನ್ನ ತವರು ಮನೆಯಲ್ಲಿದ್ದೆ. ಮಗುವಿನ ಜನನವಾದ ನಂತರ ಮಗುವಿನ ನಾಮಕರಣಕ್ಕೆ ಎದುರುದಾರರ ಮನೆಗೆ ಹೋಗಿದ್ದೆವು ಅಲ್ಲಿ ನಾಮಕರಣ ಮಾಡಿ ತೊಟ್ಟಿಲು ಶಾಸ್ತ್ರಕ್ಕೆ ನಮ್ಮ ಮನೆಗೆ ಹೋದೆನು. ಮತ್ತೆ ನಾನು ಗಂಡನ ಮನೆಗೆ ಹೋಗಲು ಪ್ರಯತ್ನ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತವರು ಮನೆಯಲ್ಲಿದ್ದಾಗ ನನ್ನ ಗಂಡನಿಗೆ ಕೊಟ್ಟ ಚಿನ್ನದ ಸರ ಚೆನ್ನಾಗಿಲ್ಲ ಎಂದು ವಾಪಸ್ಸು ಕೊಡಲು ಬಂದಿದ್ದರು. ತದ ನಂತರ ನಾನು ಅವರ ಮನೆಗೆ ಹೋಗಿದ್ದೆ ಆಗ ಚಿನ್ನದ ಸರ ತಂದಿಲ್ಲ ಎಂದು ಗಲಾಟೆ ಮಾಡಿದರು. ಇದಕ್ಕೆ ಸಂಬಂಧಪಟ್ಟಂತೆ ನಾನು ಪೋಲೀಸ್ ದೂರು ನೀಡಿರುವುದಿಲ್ಲ. ಮೊದಲನೇ ಮಗುವಿನ ಬಾಣಂತನಕ್ಕೆ ಹೋದ ನಾನು ಗಂಡನ ಮನೆಗೆ ವಾಪಸ್ಸು ಬಂದಿಲ್ಲ ಎಂದರೆ ಸರಿಯಲ್ಲ. ಎರಡನೇ ಮಗು ಜನನವಾದ ಬಗ್ಗೆ ನನ್ನ ಗಂಡನಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಎರಡನೇ ಮಗುವಿನ ಗರ್ಭಿಣಿಯಾದ ವಿಚಾರ ನನ್ನ ಗಂಡ ಮತ್ತು ಅತ್ತೆ ಮಾವನಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಎರಡನೇ ಮಗುವಿನ ನಾಮಕರಣಕ್ಕೂ ನಾನು ಎದುರುದಾರರನ್ನು ಕರೆದಿಲ್ಲ ಎಂದರೆ ಸಾಕ್ಷಿಯು ಕರೆದಿದ್ದೆವು ನನ್ನ ಗಂಡ ಬರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ನ್ಯಾಯಾಲಯದ ಮುಂದೆ ನನ್ನ ಗಂಡನ ಜೊತೆ ಬಾಳ್ವೆ ಮಾಡಬೇಕೆಂದು ಕೋರಿ ಅರ್ಜಿ

ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ನನ್ನ ಯಜಮಾನರ ಮನೆಗೆ ಹೋಗಲು ಇಚ್ಛೆ ಪಡುತ್ತೇನೆ ಆದರೆ ಅತ್ತಿಗೆ ನಾದಿನಿಯರ ಜೊತೆ ಇರಲು ಇಷ್ಟ ಪಡುವುದಿಲ್ಲ ಎಂದು ಉತ್ತರಿಸುತ್ತಾರೆ.

ಮಧ್ಯರಾತ್ರಿ ಕೂಡ ನನ್ನ ಯಜಮಾನರು ಜಗಳ ಮಾಡುತ್ತಿದ್ದರು ಮತ್ತು ಮನೆ ಬಿಟ್ಟು ಹೋಗು ಎನ್ನುತ್ತಿದ್ದರು. ನಾನು ಈ ಬಗ್ಗೆ ಕೂಡ ಪೋಲಿಸ್ ಠಾಣೆಯಲ್ಲಿ ದೂರು ನೀಡಲಿಲ್ಲ. ನನ್ನ ಹೊಟ್ಟೆಯಲ್ಲಿದ್ದ ಗಂಟನ್ನು ಆಪರೇಷನ್ ಮಾಡಿ ತೆಗೆಸಲು ಎದುರುದಾರರು ಮತ್ತು ಅವರ ಮನೆಯವರು ಅದರ ವೆಚ್ಚವನ್ನು ಭರಿಸಿರುತ್ತಾರೆ ಎಂದರೆ ಸುಳ್ಳು. ಮದುವೆಯಾಗಿ ಮೊದಲನೇ ಮಗುವಿನ ಬಾಣಂತನಕ್ಕೆ ಹೋದ ನಂತರ ಇಲ್ಲಿಯವರೆಗೂ ನಾನು ಸೋದರಮಾವನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸುಳ್ಳು. ಇವತ್ತೂ ಕೂಡ ನಾನು ನನ್ನ ತವರು ಮನೆಗೆ ಹೋಗದೇ ಮಾವನ ಮನೆಯಲ್ಲಿ ಇದ್ದೇನೆ ಎಂದು ಹೇಳುವುದು ಸುಳ್ಳು. ಎದುರುದಾರರ ಮನೆಯವರು ತೊಂದರೆ ಕೊಟ್ಟಿಲ್ಲ ನಾನೇ ಅವರನ್ನು ಪುಸಲಾಯಿಸಿ ಬೇರೆ ಮನೆ ಮಾಡಿ ಎಂದು ತೊಂದರೆ ಕೊಟ್ಟಿದ್ದೇನೆ ಎನ್ನುವುದು ಸುಳ್ಳು. ನಾನು ಇವತ್ತಿಗೂ ಕೂಡ ನನ್ನ ಗಂಡ ಮತ್ತು ಅವರ ತಂದೆ ತಾಯಿ ಜೊತೆ ಇರಲು ಇಷ್ಟ ಪಡುತ್ತೇನೆ. ಗಂಡನ ತಂದೆ ತಾಯಿ ಮತ್ತು ನನ್ನ ಗಂಡ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.